<u>ಸಾಕ್ಷಿಯನ್ನು ದಿಃ**02.12.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಬಿ.ಆರ್.ಆರ್.ವಕೀಲರಿಂದ:</u>

1 ನೇ ವಾದಿಗೆ ವಯಸ್ಸಾಗಿದ್ದು, 2 ನೇ ವಾದಿಗೆ ಮಂಡಿ ನೋವು ಹಾಗೂ ಅವರು ಫ್ಯಾಕ್ಟರಿಯಲ್ಲಿ ಕೆಲಸದಲ್ಲಿದ್ದ ಕಾರಣ ಅವರು ನನಗೆ ಅಧಿಕಾರ ಪತ್ರ ನೀಡಿರುತ್ತಾರೆ. 2 ನೇ ವಾದಿಯು ಫ್ಯಾಕ್ಟರಿಯಲ್ಲಿ ದೈಹಿಕ ಶ್ರಮವಿರುವ ಕೆಲಸ ಮಾಡುತ್ತಾರೆ. 1 ನೇ ವಾದಿ ಅಧಿಕಾರ ಪತ್ರ ನೀಡುವಾಗ ಒಂದು ಬಾರಿ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನಾನು ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ ಹಾಲಿ ವಾಸವಿದ್ದೇನೆ. ನನ್ನ ಮೂಲ ವಾಸ ರಾಮನಾಯಕನಪಾಳ್ಯ. ವಾದಿಗಳು ಸಲ್ಲಿಸಿರುವ ಚೆಕ್ಕು ಬಂದಿಯನ್ನು ನಾನು ನೋಡಿರುತ್ತೇನೆ. ಪಶ್ಚಿಮಕ್ಕೆ ತೋರಿಸಿರುವ ಸರ್ಕಾರಿ ಟಾರ್ ರಸ್ತೆ ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಪಶ್ಚಿಮಕ್ಕೆ ಇರುವ ಟಾರ್ ರಸ್ತೆಯೇ ನಾವು ತೋರಿಸಿರುವ ಪಶ್ಚಿಮದ ಚೆಕ್ಕು ಬಂದಿ ಆಗಿರುತ್ತದೆ ಎಂದು ಗುರುತಿಸಿದ್ದು, ಸದರಿ ಫೋಟೋವನ್ನು ನಿಡಿ.**1** ಎಂದು ಗುರುತಿಸಲಾಗಿದೆ. ನಿಡಿ.1 ರಲ್ಲಿರುವ ಕೆಂಪು ಬಣ್ಣ ಇರುವ ಹಾಗೂ ಮನೆಯ ಮುಂದೆ ತೆಂಗಿನ ಗರಿ ಇರುವ ಮನೆ ನಮ್ಮ ಸಂಬಂಧಿ ಶಿವಲಿಂಗಯ್ಯರವರಿಗೆ ಸೇರಿರುವ ಮನೆಯಾಗಿರುತ್ತದೆ. ಸದರಿ ಮನೆಯಿಂದ ಟಾರ್ ರಸ್ತೆಯವರೆಗೆ ಇರುವ ತೆಂಗಿನ ಮರದ ಖಾಲಿ ಜಾಗ ಶಿವಲಿಂಗಯ್ಯರವರಿಗೆ ಸೇರಿರುತ್ತದೆ. ನಿಡಿ.1 ರಲ್ಲಿ ನಮ್ಮದು ಎಂದು ಹೇಳುವ ಸ್ವತ್ತು ಹಳದಿ ಟ್ಯಾಂಕ್ ಇರುವ

ಮನೆಯಾಗಿರುತ್ತದೆ. ವಾಸ್ತವಿಕವಾಗಿ ನಮ್ಮ ಮನೆ ಎಂದು ಹೇಳುವ ಮನೆಯ ನಂತರ ಶಿವಲಿಂಗಯ್ಯರವರ ಮನೆ ಮತ್ತು ಖಾಲಿ ಜಾಗದ ನಂತರ ಪಶ್ಚಿಮ ದಿಕ್ಕಿಗೆ ರಸ್ತೆ ಇದೆ. ಶಿವಲಿಂಗಯ್ಯನವರ ಮನೆಯ ವಿಸ್ತೀರ್ಣ ಮತ್ತು ಖಾಲಿ ಜಾಗದ ವಿಸ್ತೀರ್ಣ ನನಗೆ ಗೊತ್ತಿಲ್ಲ.

ನಮ್ಮದು ಎಂದು ಹೇಳುವ ಮನೆ ಮತ್ತು ಶಿವಲಿಂಗಯ್ಯನವರ ಮನೆಯ ನಡುವೆ ಮಧ್ಯದಲ್ಲಿ ಗಲ್ಲಿ ಇದೆ ಎಂದರೆ ಸಾಕ್ಷಿಯು ಓಡಾಡಲು 2 ಅಡಿ ಜಾಗವಿದೆ ಎಂದು ನುಡಿಯುತ್ತಾರೆ. ನಮ್ಮ ಮನೆ ಎಂದು ಹೇಳುವ ಸ್ವತ್ತಿನ ಪಶ್ಚಿಮಕ್ಕೆ ತೋರಿಸುವ ರಸ್ತೆ ವಾಸ್ತವಿಕತೆಗೆ ವಿರುದ್ದವಾಗಿದೆ ಎಂದರೆ ಸಾಕ್ಷಿಯು ತಮ್ಮ ಪತ್ರದಲ್ಲಿರುವಂತೆ ತೋರಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಅಳತೆ ನಿಡಿ.1 ರಲ್ಲಿ ಕಾಣುವ ರಸ್ತೆಯಿಂದ ನಮ್ಮ ಮನೆ ಇರುವ ಅಳತೆಯೇ ಅಥವಾ ಶಿವಲಿಂಗಯ್ಯನವರ ಮನೆಯ ನಂತರ ನಮ್ಮ ಆಸ್ತಿಯ ಅಳತೆಯೇ ಎಂದರೆ ಸಾಕ್ಷಿಯು ರಸ್ತೆಯಿಂದ ತಮ್ಮ ಮನೆಗೆ ಸದರಿ ಅಳತೆ ನೀಡಲಾಗಿದೆ ಎಂದು ನುಡಿಯುತ್ತಾರೆ. ನಾವು ತೋರಿಸಿರುವ ದಾವಾ ಆಸ್ತಿಯ ಅಳತೆಯಲ್ಲಿ ಶಿವಲಿಂಗಯ್ಯನವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸದರಿಯವರು ಸ್ವಾಧೀನಾನುಭವದಲ್ಲಿರುವ ಕುರಿತು ತೋರಿಸಲಾಗಿದೆ ಎಂದರೆ ಸಾಕ್ಷಿಯು ತಾವು ಬೇರೆ ಮತ್ತು ಅವರು ಬೇರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಪ್ರಕಾರ ರಸ್ತೆಯಿಂದ ಪೂರ್ವದ ಕಡೆಗೆ ನಮ್ಮ ಆಸ್ತಿ ಒಂದು ಗುಂಟೆ ವಿಸ್ತೀರ್ಣವನ್ನು ಒಳಗೊಂಡಿದೆ. ನಿಡಿ.1 ರಲ್ಲಿ ಕಾಣುವ ಟಾರ್ ರಸ್ತೆಗೆ ಹೊಂದಿಕೊಂಡಂತೆ ನಮ್ಮದು ಯಾವುದೇ ಆಸ್ತಿ ಇರುವುದಿಲ್ಲ. ದಾವಾ ಪಶ್ಚಿಮಕ್ಕೆ ಏಕೆ ಸುಳ್ಳು ಚೆಕ್ಕು ಬಂದಿಯನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿಯು ತಾವು ತಮ್ಮ 1972 ರ ಪತ್ರದಂತೆ ತೋರಿಸಿರುವುದಾಗಿ ನುಡಿಯುತ್ತಾರೆ. ನಿಪಿ.2 ರಲ್ಲಿ ವಾಸ್ತವಿಕವಾಗಿ ಪೂರ್ವಕ್ಕೆ ಚೆಕ್ಕು ಬಂದಿ ತಪ್ಪು ತೋರಿಸಲಾಗಿದೆ ಎಂದರೆ ಸಾಕ್ಷಿಯು ರಸ್ತೆ ಇಲ್ಲ ಎಂದು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಿಡಿ.1 ರಲ್ಲಿ ಹಳದಿ ಬಣ್ಣ ಟ್ಯಾಂಕ್ ಇರುವ ಮನೆಯ ಪಕ್ಕ ಅಂದರೆ ಪಶ್ಚಿಮಕ್ಕೆ ತಮ್ಮ ನಿವೇಶನವಿದ್ದು, ಸದರಿ ಆಸ್ತಿಗೆ ಈ ದಾವೆಯನ್ನು ಹೂಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ನಿವೇಶನ ನಮ್ಮ ಮನೆಗೆ ಹೊಂದಿಕೊಂಡಂತೆಯೇ ಬರುತ್ತದೆ. ನಮ್ಮದು ಎಂದು ಹೇಳುವ ಮನೆಯ ಮುಖ್ಯ ಬಾಗಿಲು ಪೂರ್ವಕ್ಕೆ ಇದೆ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

_( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)_

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.